**ದಿ:04.01.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ: ವಾದಿ ಪರ ವಕೀಲರಿಂದ:** ಸಾಕ್ಷಿಯು ತನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಅಂಶಗಳನ್ನು ತಾನೇ ಹೇಳಿ ಬರೆಸಿರುವುದಾಗಿ ಮತ್ತು ಸತ್ಯವಾಗಿದೆ ಎಂದು ನುಡಿದಿದ್ದಾರೆ.

3 ನೇ ವಾದಿ ನನ್ನ ಗಂಡ. ಸದರಿಯವರು 04.04.2024 ರಂದು ಮೃತಪಟ್ಟಿರುತ್ತಾರೆ. 3 ನೇ ವಾದಿಗೆ ಸಂಬಂಧಿಸಿದಂತೆ ಮರಣ ಪ್ರಮಾಣ ಪತ್ರದ ದೃಢೀಕರಣ ಪತ್ರ ನಿ ಪಿ 1 ಎಂದು ಗುರುತಿಸಲಾಯಿತು.

**ಪಾಟೀ ಸವಾಲು: 15 ನೇ ಪ್ರತಿವಾದಿ ಪರ ವಕೀಲರಿಂದ:**

1 ನೇ ವಾದಿ ನನ್ನ ಅತ್ತೆ. 1 ನೇ ವಾದಿ, ನಾನು ಮತ್ತು ನನ್ನ ಮಗಳು ಒಟ್ಟಿಗೆ ವಾಸಿಸುತ್ತಿದ್ದೇವೆ. ನಾನು ಮತ್ತು 1 ನೇ ವಾದಿ ಅನ್ಯೋನ್ಯವಾಗಿ ಇದ್ದೇವೆ ಎಂದರೆ ಸರಿ. 1 ನೇ ವಾದಿ ಈ ದಾವೆಗೆ ಸಂಬಂಧಿಸಿದಂತೆ ನನ್ನ ಜೊತೆ ವಿಚಾರಣೆ ಮಾಡುತ್ತಾರೆ ಎಂದರೆ ಸುಳ್ಳು. ನನ್ನ ಗಂಡ, ಅತ್ತೆ ಮತ್ತು ನಾದಿನಿ ಈ ದಾವೆಯನ್ನು ದಾಖಲಿಸಿರುವ ಬಗ್ಗೆ ನನ್ನ ಗಂಡ ತಿಳಿಸಿದ್ದರು ಎಂದರೆ ಸುಳ್ಳು. ದಾವೆ ಯಾವ ನ್ಯಾಯಾಲಯದಲ್ಲಿ ಇದೆ ಎಂಬುದರ ಬಗ್ಗೆ ನಾನು ಕೇಳಿ ತಿಳಿದುಕೊಂಡಿರುವುದಿಲ್ಲ. ಈ ದಾವೆಯನ್ನು ನನ್ನ ಗಂಡ ಮತ್ತು ಅತ್ತೆ ಹಾಗೂ ನಾದಿನಿ ದಾಖಲಿಸಿದ ವಿಷಯ ಗೊತ್ತಿದ್ದರೂ ಕೂಡ ಯಾವುದೇ ಸಕಾರಣ ಇಲ್ಲದೆ ನಾನು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸುಳ್ಳು. ನಾನು ನನ್ನ ಅರ್ಜಿಯಲ್ಲಿ ವಿಳಂಬವನ್ನು ಮನ್ನಿಸಲು ಯಾವುದೇ ಸಕಾರಣ ತಿಳಿಸಿರುವುದಿಲ್ಲ ಎಂದರೆ ಸುಳ್ಳು.

**ಮರುವಿಚಾರಣೆ: ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-
(ಎನ್ ಬಿ ಜಯಲಕ್ಷ್ಮಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.